ಪ್ಲಾನ್ ಆಗಿದೆಯಲ್ಲ. ನಾಳೆಯೇ ಹೊರಡಬೇಕು. ಮೂರು ಕುಟುಂಬಗಳ ಹನ್ನೆರಡು ಜನ ನನಗಾಗಿ ಕಾಯುತ್ತಿದ್ದಾರೆ. ಚಿಕ್ಕಮಗಳೂರಿನಲ್ಲಿ ಹೋಮ್‌ಸ್ಟೇ ಬುಕ್ ಆಗಿದೆ. ಪೂರ್ತಿ ದುಡ್ಡು ಕೊಟ್ಟಾಗಿದೆ. 'ಅಯ್ಯೋ ದೇವರ... ಈಗ ಏನ ಮಾಡ್ಲಿ?' ಎಂದು ಸಶಬ್ದವಾಗೇ ನುಡಿದೆ.

ಹುಡುಗ ನನ್ನೆಡೆಗೆ ಕನಿಕರದಿಂದ ನೋಡಿದ. 'ಒಬ್ಬರ ಬಂದೀರೇನ್ರಿ ಮೇಡಮ್?' ಎಂದು ಕೇಳಿದ. ಹೇಳಲೋ ಬೇಡವೋ ಎಂದು ಅನುಮಾನಿಸುತ್ತ, 'ಹೌದಪ್ಪಾ' ಎಂದು ನಿಜವನ್ನೇ ಹೇಳಿದೆ. 'ಹಿಂತಾ ಟೈಮ್‌ದಾಗ ಯಾವ ಹೋಟೆಲ್ಲೂ ಸೇಫ್ ಇರೂದುಲ್ರಿ. ಮೈಮ್ಯಾಲೆ ಬಂಗಾರದ ದಾಗೀನಾ ಹಾಕ್ಕೊಂಡೀರಿ. ಒಬ್ಬರ ಅದೀರಿ. ಬೇಕಾದ್ರ ನಮ್ಮನಿ ಬಾಜೂಕ ಒಂದ ಖಾಲಿ ಮನಿ ಐತಿ. ಅಗದಿ ಸೇಫ್. ಅಲ್ಲೆ ಕೂತು ಫ್ರೆಶ್ ಆಗರಿ. ಚಾ, ಊಟಾ ಮುಂದಿನ ಮನಿಯಾವ್ರು ಕೊಡತಾರ. ಚಾರ್ಜು ಕೊಟ್ಟೀರೆಂತ. ಮುಗಿಸಿ ನಿಮ್ಮನ್ನ ಊರಿಗೆ ಕಳಸ್ತೇನಂತ... ಅದೂ ಒಳಗಿನ ರೋಡ್‌ಲೆ. ಏನಂತೀರಿ ಲಗೂ ಹೇಳ್ರಿ. ಇಲ್ಲಿನೂ ಗದ್ಲ ಸುರುವಾದ್ರ ಭಾಳ ಮುಷ್ಕಿಲ್ ಆಗ್ತದ' ಎಂದ. ಅವನನ್ನು ನಂಬಲೋ ಬಿಡಲೋ ಎಂಬ ಧರ್ಮ ಸಂಕಟ. ಆದರೆ ಬೇರೆ ಆಯ್ಕೆಯೇ ಇರಲಿಲ್ಲ. ಅಪರಿಚಿತ ಆಟೋ ಡ್ರೈವರ್. ರಿಸ್ಕ್ ತೆಗೆದುಕೊಳ್ಳುತ್ತಿದ್ದೇನೆ ಎನಿಸಿದರೂ ಅನಿವಾರ್ಯವಾಗಿತ್ತು. 'ಆತು ಬಿಡು. ಎಲ್ಲದ ನಿಮ್ಮ ಮನಿ?' ಎಂದು ಕೇಳಿದೆ. 'ಇಲ್ಲೇ ಸಮೀಪನ ಅದ' ಎಂದು 'ಭರ್...' ಎನಿಸುತ್ತ ಓಡಿಸಿದ. ಅವ ಹೇಳಿದಂತೆ ಒಡವೆಗಳ ನೆನಪಾಗಿತ್ತು. ಪ್ರತಿ ಬಾರಿ ಒಬ್ಬಳೇ ಹೋಗುವಾಗ ತೆಗೆದಿಟ್ಟು ನಕಲಿ ತೊಟ್ಟು ಬರುತ್ತಿದ್ದವಳು ಈ ಬಾರಿ ಅವಸರದಲ್ಲಿ ಹಾಗೇ ಬಂದಿದ್ದೆ. ಎರಡೇ ನಿಮಿಷದಲ್ಲಿ ಗಲ್ಲಿಯೊಂದರಲ್ಲಿನ ಪುಟ್ಟ ಮನೆಯ ಮುಂದೆ ಆಟೊ ನಿಂತಿತ್ತು.

ಕಳವಳದಿಂದಲೇ ಸುತ್ತಲೂ ನೋಡುತ್ತ ಇಳಿದೆ. ಯಾವ ಬೀದಿ... ಯಾವ ಗಲ್ಲಿ... ತಿಳಿಯುತ್ತಿಲ್ಲ. ಸಾಮಾನು ತಂದು ತಾನೇ ಒಳಗಿಟ್ಟ ಹುಡುಗ 'ಕಡಕ್ ಛಾ ಹೇಳ್ಲಿರಿ ಮೇಡಮ್?'ಎಂದು ಕೇಳಿದ. 'ಬ್ಯಾಡಪಾ... ಇದ್ದರ ಕಾಫಿ ಹೇಳು'ಎಂದೆ. 'ನೀವು ಜರಾ ಫ್ರೆಶ್ ಆಗರಿ. ಅಷ್ಟರಾಗ ಬರತೇತಿ' ಎಂದವ 'ಪಾರ್ಸೆಲ್ ಹೇಳಿಬಿಡತೇನಿ. ಯಾವುದು ಚಪಾತಿನೋ... ರೊಟ್ಟಿ ಊಟಾನೊ?' ಎಂದು ಕೇಳಿದ. 'ಎರಡು ಮೆತ್ತಗ ರೊಟ್ಟಿ, ಪಲ್ಯ ಹೇಳಿಬಿಡು... ಸಾಕು'ಎಂದೆ. ಕತ್ತಾಡಿಸಿದವ ಗಡಿಬಿಡಿಯಿಂದಲೇ ಹೊರಟ. ನನಗೋ ಹೆದರಿಕೆಯಿಂದ ನೈಸರ್ಗಿಕ ಕರೆ ಕರೆಯುತ್ತಿತ್ತು. ಚಿಕ್ಕ ಮನೆ... ಒಂದು ಬೆಡ್ ರೂಮಿನದು. ಪೂರ್ತಿ ಖಾಲಿ ಇತ್ತು. ಬಚ್ಚಲಿಗೆ ಹೊರಟೆ. ಅಷ್ಟರಲ್ಲೇ ಯಾರೋ ವೃದ್ಧರೊಬ್ಬರು ಇಣುಕಿ ನೋಡಿದಂತಾಯಿತು. ಎಲ್ಲೋ ನೋಡಿದ ಮುಖ. ಆ ಕಂಗಳಲ್ಲಿ ಅಚ್ಚರಿಯೊಂದಿಗೆ ಆನಂದ ವಿಷಾದ ಮೇಳೈಸಿದಂತೆ ಭಾಸ. ಯೋಚಿಸಲು ಸಮಯವಿರಲಿಲ್ಲ. ಫ್ರೆಶ್ ಆಗಿ ಬಂದಾಗ ಕಾಫಿ ಟೇಬಲ್ ಮೇಲಿತ್ತು. ಇನ್ನೇನು ಕುಡಿಯಬೇಕೆನ್ನುವಷ್ಟರಲ್ಲಿ ಆ ವೃದ್ಧ ಒಳಗೆ ಬಂದಿದ್ದ. 'ಹ್ಯಾಂಗದೀರಿ ವೈನಿ...?'ಎಂದು ಕೇಳಿದಾಗ ಅವನ ಧ್ವನಿಯಿಂದಲೇ ಗುರುತಿಸಿ, 'ಅನ್ವರ್... ನೀವಿಲ್ಲೆ?' ಎಂದು ಆಶ್ಚರ್ಯದಿಂದ ಕೇಳಿದೆ. 'ಹೌದರಿ. ನಾ ಈಗ ಇಲ್ಲೇ ಅದೀನಿ' ಎಂದಾಗ ಹೆದರಿಕೆ ಸಂಶಯವೆಲ್ಲ ತೊಲಗಿ ಮನಸ್ಸು ನಿರಾಳವೆನಿಸಿತು. 'ಹೊರಗೆಲ್ಲಾ ಗದ್ಲ ನಡದದ. ನನಗರೆ ಇವತ್ತ ಬೆಂಗಳೂರಿಗೆ ಹೋಗ್ಲೇಬೇಕು. ರಿಕ್ಷಾದ ಹುಡುಗ ಇಲ್ಲೆ ಕರಕೊಂಡ ಬಂದ. ಅರೇದ ಹುಡುಗ.. ಹೊಸಾ ಜಾಗ.. ಅಂತ ಮದ್ಲ ಅಂಜಿದ್ದೆ. ನಿಮ್ಮನ್ನ ನೋಡಿದ ಮ್ಯಾಲೆ ನಿಶ್ಚಿಂತ್ಯಾತು' ಎಂದು ಕಾಫಿ ಕುಡಿಯಲು ಮುಂದಾದೆ. 'ಅದು ಬ್ಯಾಡ ಬರ್ರಿ. ಇಲ್ಲೆ ಛೋಲೊ ಇರಾಂಗಿಲ್ಲ. ಮದ್ಲ ಹೊಂಟಬಿಡೂಣು. ಗದ್ಲ ಜೋರಾಗ್ತದೋ ಏನೋ ಹೇಳಾಕ ಬರಂಗಿಲ್ಲ' ಎನ್ನುತ್ತ ನನ್ನ ಲಗ್ಗೇಜ್ ಎತ್ತಿಕೊಂಡ. 'ಅನ್ವರ್, ಊಟಾ ಪಾರ್ಸೆಲ್ ಹೇಳೇನಿ' ಎಂದು ಕೂಗಿದೆ. "ಬ್ಯಾಡ ಬರ್ರಿ. ಹಾದ್ಯಾಗ ತೊಗೊಂಡೀರೆಂತ. ಗದ್ಲ ಹೆಚ್ಚಾಗೋಕಿಂತಾ ಮದಲ ಸ್ಟೇಷನ್ ಸೇರಕೊಂಡಬಿಡೋಣು" ಎಂದು ಸಾಮಾನುಗಳನ್ನು ಹೊತ್ತು ಬೇರೆ ಆಟೋದತ್ತ ನಡೆದ. ನಾನೂ ಪರ್ಸು ತೆಗೆದುಕೊಂಡು ಗಾಬರಿಯಿಂದಲೇ ಅವನನ್ನು ಹಿಂಬಾಲಿಸಿದೆ.

ಕುಳಿತ ಒಂದೇ ಕ್ಷಣದಲ್ಲಿ ಆಟೋ ಅತಿ ವೇಗದಿಂದ ಮುಂದೋಡಿತು. ಒಂದು ನಿಮಿಷದ ಬಳಿಕ ತುಸು ನಿಧಾನಿಸಿದವ, 'ಎಲ್ಲೆರಿ ವೈನಿ, ಸ್ಟೇಷನ್ನೋ ಇಲ್ಲಾ ಬಸ್ ಸ್ಟ್ಯಾಂಡೋ?' ಎಂದು ಕೇಳಿದ. 'ಸ್ಟೇಷನ್‌ಪಾ. ಆವಾಗಿನ ಗತೆನ.. ಚೆನ್ನಮ್ಮಾ ಎಕ್ಸಪ್ರೆಸ್...' ಎಂದೆ. ಅವನೆಣಿಸಿದಂತೆ ಸ್ಟೇಷನ್ ಮುಂದೆ ಮೇನ್